ಆ) ಹಾಗಿದ್ದಲ್ಲಿ ಈ ಯೋಜನೆಯು ನೀತಿ, ನಿಯಮಗಳ ನಮೂನೆಗಳಾವುವು?

ಇ) ಈ ವಿಷಾಡು ಯಾವ ದಿನಾಂಕದಿಂದ ಜಾರಿಗೆ ಬರುತ್ತದೆ?

ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಈ ರೀತಿ ಯಾವ ಯೋಜನೆಯನ್ನೂ ಹಾಕಿಕೊಂಡಿಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲಾ.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲಾ.

ಶಿರಾ ತಾಲ್ಲೂಕಿನಲ್ಲಿ ಳಿನೇ ರಾಷ್ಟ್ರೀಯ ಹೆದ್ದಾರಿಗೆ ತರಿ ಜಮೀನಿನ ಭೂಸ್ವಾದೀನದ ಬಗ್ಗೆ

೨೦೭ (೧೩೮) ಶ್ರೀ ಬಿ. ಗಂಗಣ್ಣ (ಕಳಂಬೆಳ್ಳ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಸಿರಾ ತಾಲ್ಲೂಕಿನ ತಾವರೆಕೆರೆ ದ್ವಾರಾಳುವಿನ ಸಮೀಪ ಳಿನೇ ನಂಬರ್ ರಾಷ್ಟ್ರೀಯ ಹೆದ್ದಾರಿಗೆ ಬೇಕಾಗಿರುವ ಜಮೀನುಗಳಿಗೆ ಸರಕಾರವು ಭೂಸ್ವಾಧಿ ನದ ಮೊಬಲಗನ್ನು ಪಾವತಿ ಮಾಡಿದೆಯೇ?

ಆ) ಭೂಸ್ವಾಧೀನವಾಗಿರುವ ಜಮೀನುಗಳಿಗೆ ಮೊಬಲಗು ಪಾವತಿ ಆಗಿಲ್ಲದೆ ಇರುವ ಈ ಸರಹದ ಪ್ರಕರಣಗಳು ಯಾವುದಾದರೂ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಪರಿಹಾರ ಮೊಬಲಗನ್ನು ಯಾವಾಗ ಪಾವತಿ ಮಾಡಲಾಗುತ್ತಿದೆ?

ಶ್ರೀ ಹೆಚ್.ಡಿ. ದೆ.ವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಸಂಬಂಧಪಟ್ಟ ಹಳ್ಳಿಗಳ ಬಗ್ಗೆ ಇಂತಹ ಪ್ರಕರಣಗಳು ಇಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮನವಿಗಳು

ಶ್ರೀ ಮೈಕೇಲ್ ಫರ್ನಾಂಡಿಸ್.—ನಾನು ಖಿಖಿಳನೇ ನಿಯಮದ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ ಪೋಲೀಸರು ಪಂಚಿಳೆಯರಿಗೆ ಯಾವ ತರಹ.....

MR SPEAKER.—The Business Advisory Committee has decided not to take up anything under 334 to-day.

ಶ್ರೀ ಪಂಪಾಪತಿ.—ಹೆಣ್ಣು ಮಕ್ಕಳಿಗೆ ಹೊಡೆದಿದ್ದಾರೆ.

ಅಧ್ಯಕ್ಷರು.—ಹೆಣ್ಣು ಮಕ್ಕಳಿಗಾದರೂ ಆಷ್ಟೆ, ಗಂಡು ಮಕ್ಕಳಿಗಾದರೂ ಆಷ್ಟೆ. ನಿನ್ನೆ ನಡೆದ ಬಿಸಿನೆಸ್ ಆಡ್ವೈಸರಿ ಕಮಿಟಿ ಮಿಾಟಿಂಗ್‌ನಲ್ಲಿ ಖಿಖಿಳರ ನಿಯಮದ ಪ್ರಕಾರ ಯಾವ ವಿಷಯವನ್ನೂ ಇಂದು ತೆಗೆದುಕೊಳ್ಳಬಾರದು ಎಂದು ತೀರ್ಮಾನ ಆಗಿದೆ. ತಮ್ಮ ನಾಯಕರೂ ಇದ್ದರು. ಅವರನ್ನು ಕೇಳಿ.

ಶ್ರೀ ಪಂಪಾತಿ.—ಪೋಲೀಸರು ಅಲ್ಲಿ ಹೆಣ್ಣು ಮಕ್ಕಳಿಗೆ ಹೊಡೆಯುತ್ತಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ ?

ಅಧ್ಯಕ್ಷರು.—ನಿಮ್ಮ ನಾಯಕರೇ ಇದ್ದು ನಿನ್ನೆ ತೀರ್ಮಾನ ಮಾಡಿದ್ದಾರೆ.

ಶ್ರೀ ಎಂ. ಸೂರ್ಯನಾರಾಯಣ ರಾವ್.—ನಾಳೆ ತೆಗೆದುಕೊಳ್ಳಿ. ಹೆಣ್ಣು ಮಕ್ಕಳಿಗೆ ಕಣ್ಣು ಕಾಣುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಈಗಾಗಲೇ ನಿನ್ನೆ ನಡೆದ ದುರಂತದ ಬಗ್ಗೆ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ನಾನು ಧರ್ಮಸಿಂಗ್ ಅವರು, ಬಾಪೂಗೌಡರು, ಕಸಬೆಯವರು ಮತ್ತೆ ಕೆಲವರು ಅಲ್ಲಿ ಹೋಗಿ ನೋಡಿದ್ದೇವೆ. ಅದರಲ್ಲಿ ನಮ್ಮ ಭಾಗದಿಂದ ಬಂದಿರುವ ಅನೇಕ ಜನರಿದ್ದಾರೆ. ಅಲ್ಲಿ ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ.

ಅಧ್ಯಕ್ಷರು.—ನಿನ್ನೆ ಎಲ್ಲರೂ ಮಾತನಾಡಿದರು. ಆದರೆ ತಾವು ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇನ್ನೂ ೨೩ ಜನ ಒಳಗಡೆ ಇದ್ದಾರೆ. ೧೫-೨೦ ಹೆಣ್ಣು ಮಕ್ಕಳು ಬಡಿದುಕೊಂಡು ಅಳುತ್ತಿದ್ದಾರೆ. ಅವರಿಗೆ ಹೊಟ್ಟೆಗೆ ಊಟ ಇಲ್ಲ. ಯಾರಾದರೂ ಮಂತ್ರಿಗಳು ಹೋಗಿ ಒಳಗಡೆ ಇರುವವರಿಗೆ ಮತ್ತು ಹೊರಗಡೆ ಇರುವವರಿಗೆ ಊಟದ ವ್ಯವಸ್ಥೆ ಮಾಡಿಸಿದರೆ ಅನುಕೂಲವಾಗುತ್ತದೆ.

ಶ್ರೀ ಎಂ. ರಘುಪತಿ.—ಅದನ್ನೆಲ್ಲಾ ಮಾಡಿಸುತ್ತೇವೆ. ಸಾಧ್ಯವಾದರೆ ಮತ್ತೊಮ್ಮೆ ನಾವು ಹೋಗಿ ನೋಡಿಕೊಂಡು ಬರುತ್ತೇವೆ.

Finance Business Discussion and voting on Demands for grants 1983-84 Demand No. 22 State Excise 47—Power Projects.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೭೫,೯೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ, ಮತ್ತು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೦೯,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೬೬,೧೧,೯೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಗಿದೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಇವತ್ತೇ ಇದನ್ನು ಮುಗಿಸಿಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಇವತ್ತೇ ಮುಗಿಸಬೇಕೆಂದು ತೀರ್ಮಾನವಾಗಿದೆ. ತಮ್ಮ ನಾಯಕರೂ ಹೇಳಿದ್ದಾರೆ.

ಶ್ರೀ ಧರ್ಮಸಿಂಗ್.—ಇದು ಚಹಳ ಮಹತ್ವರವಾದ ಬೇಡಿಕೆ. ರಾತ್ರಿಯೆಲ್ಲಾ ಕೂರ ಬೆಕಾಗುತ್ತದೆ. ಬಹಳಷ್ಟು ಜನರು ರಾತ್ರಿಯೆಲ್ಲಾ ಕೂರಲು ಇಷ್ಟಪಡುವುದಿಲ್ಲ.

ಅಧ್ಯಕ್ಷರು.—ಇದೆಲ್ಲಾ ಚರ್ಚೆ ಮಾಡೇ ತೀರ್ಮಾನ ಮಾಡಿರುವುದು.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ —ಮಾನ್ಯ ಮಂತ್ರಿಗಳೇ ಹೇಳಿದರು ವಿದ್ಯುಚ್ಛಕ್ತಿ ಮತ್ತು ಅಬ್ಕಾರಿ ಎಂದರೆ ಒಂದು ಶಾಕ್ ಕೊಡುತ್ತದೆ, ಇನ್ನೊಂದು ಕಿಕ್ ಕೊಡುತ್ತದೆ ಎಂದು. ಅದನ್ನು ತಡೆದುಕೊಳ್ಳುವುದಕ್ಕೆ ಬಹಳ ಹೊತ್ತು ಬೇಕಾಗುತ್ತದೆ.

ಅಧ್ಯಕ್ಷರು.—ಪ್ರಾರಂಭ ಮಾಡಿ ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಷ್ಟುಬೇಗ ಮುಗಿಸಿದರೆ ಇಷ್ಟು ಬೇಗ ಕಿಕ್ ಹೇಗೆ ಕೊಡುತ್ತದೆ ?

ಶ್ರೀ ಜೆ. ಎಚ್. ಪಟೇಲ್.—ಬೇಗ ಕಿಕ್ ಕೊಡುವುದಿಲ್ಲ. ಜಾಸ್ತಿಯಾದರೆ ಮಲಗಿಸಿಬಿಡುತ್ತದೆ.